**ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ4(7)ಪ್ರೌಶಿಹೆಶಿಸ್ಥ.72/2011-12 ದಿನಾಂಕ: 04.08.2012

**ಜ್ಞಾಪನ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಕುರಿತು.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011, ದಿ:01.04.2011

2. ಸರ್ಕಾರಿ ಆದೇಶ ಸಂಖ್ಯೆ: ಇಡಿ 173 ಇಟಿಆರ್ 2007, ದಿ:15.10.2007.
3. ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:02.03.2012
4. ಈ ಕಛೇರಿಯ ಜ್ಞಾಪನ ಸಮಸಂಖ್ಯೆ ದಿನಾಂಕ:22.03.2012
5. ಈ ಕಛೇರಿಯ ಟಿಪ್ಪಣಿ ಸಂಖ್ಯೆನಿ.(ಪ್ರೌ.ಶಿ)ಹೆಚ್ಚುವರಿ ಶಿಕ್ಷಕರು-01/2012.13 ದಿ:30.06.2012
6. ದಿನಾಂಕ:04.07.2012 ರಂದು ಶಿಕ್ಷಣ ಇಲಾಖೆ ಕಾರ್ಯದರ್ಶಿಯವರು ನೀಡಿದ ಮೌಖಿಕ ಸೂಚನೆ ಮತ್ತು ಆಯುಕ್ತರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯಂತೆ
7. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿ: 10.07.2012.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (6) ರಂತೆ ಹೆಚ್ಚುವರಿ ಸ್ಥಳಾಂತರ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಈಗ ತಿಳಿದು ಬಂದ ಬಾತ್ಮೀಯಂತೆ ಕೆಲವು ಉಪನಿರ್ದೇಶಕರು ತುಂಬಾ ಹತ್ತಿರದಲ್ಲಿ ನಿವೃತ್ತರಾಗುವ ಶಿಕ್ಷಕರಿದ್ದ ಶಾಲೆಯಲ್ಲಿ ಅದೇ ವಿಷಯದ ಇನ್ನೊಬ್ಬ ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸಿ ಪ್ರಕಟಿಸಿರುತ್ತಾರೆ. ಇದು ತರ್ಕಬದ್ಧ ಎನಿಸಿದರೂ ಪ್ರಾಯೋಗಿಕವಲ್ಲ. ಏಕೆಂದರೆ ಹೆಚ್ಚುವರಿ ಶಿಕ್ಷಕರು ವರ್ಗಾವಣೆಯಿಂದ ಬೇರೆಡೆಗೆ ಹೋಗುತ್ತಾರೆ. ನಿವೃತ್ತಿ ಹೊಂದುವ ಶಿಕ್ಷಕರು ನಿವೃತ್ತಿ ಹೊಂದಿದ ನಂತರ ಆ ಶಾಲೆಯಲ್ಲಿ ಆ ವಿಷಯ ಬೋಧಿಸುವ ಶಿಕ್ಷಕರು ಇಲ್ಲದಂತಾಗುತ್ತದೆ ಇದು ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಯ ಆಶಯ ಅಲ್ಲ.

ಆದ್ದರಿಂದ ಮೇಲೆ ಹೇಳಿದ ಪ್ರಕರಣಗಳಿರುವಂತಹ ಅಂದರೆ ತೀರಾ ಹತ್ತಿರದಲ್ಲಿ ನಿವೃತ್ತರಾಗುವ ಶಿಕ್ಷಕರಿದ್ದರೆ, ಆ ವಿಷಯದ ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರ ಮಾಡಬಾರದಾಗಿ ತಿಳಿಸಿದೆ. ಡಿಸೆಂಬರ್ 2012ರ ತರುವಾಯ ನಿವೃತ್ತಿಯಾಗುವ ಪ್ರಕರಣಗಳಲ್ಲಿ ಮಾತ್ರ ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರಿಸಗೊಳಿಸಬಹುದು ಹಾಗೂ ಈ ರೀತಿ ಶಿಕ್ಷಕರಿಲ್ಲದಿರುವ ಪ್ರಸಂಗ ಡಿಸೆಂಬರ್ ನಂತರ ಏರ್ಪಟ್ಟಲ್ಲಿ ತಮ್ಮ ಜಿಲ್ಲೆಗೆ ನಿಗದಿಪಡಿಸಿದ ಗುರಿಯ ಮಿತಿಯಲ್ಲಿ (2012-13 ರ) ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳುವುದು.

ಇದೇ ರೀತಿ ಪ್ರೌಢಶಾಲೆಗೆ ಮುಖ್ಯ ಶಿಕ್ಷಕರಾಗಿ ಮುಂಬಡ್ತಿ ಹೊಂದುತ್ತಿರುವ ಸಹಶಿಕ್ಷಕರ ಪ್ರಕರಣಗಳಲ್ಲಿ ಕೂಡ ಮೇಲಿನಂತೆ ಆಯಾ ವಿಷಯಗಳಲ್ಲಿ ಶೂನ್ಯ ಶಿಕ್ಷಕರು ಆ ಶಾಲೆಗಳಲ್ಲಿ ಏರ್ಪಡುವ ಸಂಭವ ಇರುತ್ತದೆ. ಇಂದು ವೆಬ್‌ಸೈಟ್‌ನಲ್ಲಿ ಮುಂಬಡ್ತಿ ಹೊಂದುತ್ತಿರುವ ಸಹಶಿಕ್ಷಕರ ಪಟ್ಟಿಯನ್ನು ಪ್ರಕಟಿಸಿದೆ. ಅದನ್ನು ಗಮನಿಸಿಕೊಂಡು ಒಂದು ಶಾಲೆಯಲ್ಲಿ ಹೆಚ್ಚುವರಿ ಶಿಕ್ಷಕರು ಮುಂಬಡ್ತಿ ಹೊಂದುತ್ತಿರುವ ವಿಷಯದಲ್ಲಿ ಇದ್ದರೆ ಅಂತಹವರನ್ನು ಹೆಚ್ಚುವರಿ ಎಂದು ಸ್ಥಳಾಂತರಿಸದಿರಲು ಸೂಚಿಸಿದೆ. ಒಟ್ಟಾರೆ ನಿವೃತ್ತಿ ಮತ್ತು ಮುಂಬಡ್ತಿ ಹಿನ್ನೆಲೆಯಲ್ಲಿ ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರಿಸುವುದರಿಂದ ಆ ವಿಷಯದಲ್ಲಿ ಶೂನ್ಯ ಶಿಕ್ಷಕರು ಆ ಶಾಲೆಯಲ್ಲಿ ಏರ್ಪಡಬಾರದು ಎಂಬುದು ಆಶಯ. ಜಾಗರೂಕತೆಯಿಂದ ಕ್ರಮವಹಿಸಲು ಸೂಚಿಸಿದೆ

(ಸಹಿ) 04.08.12

ನಿರ್ದೇಶಕರು (ಪ್ರೌಢಶಿಕ್ಷಣ)

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ ಇವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರ ಆಪ್ತ ಕಾರ್ಯದರ್ಶಿಗಳು ಇವರ ಸೂಕ್ತ ಕ್ರಮಕ್ಕಾಗಿ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.

5. ನಿರ್ದೇಶಕರು, ಆರ್.ಎಂ.ಎಸ್.ಎ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
6. ಅಪರ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು
7. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
8. ಸಹನಿರ್ದೇಶಕರು (ಗುಣಮಟ್ಟ) ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
11. ಇ-ಗವರ್ನೆನ್ಸ್ ಶಾಖೆ: ಆನ್-ಲೈನ್ ನಲ್ಲಿ ಕೌನ್ಸಿಲಿಂಗ್ ನಡೆಸಲು ಅನುಕೂಲವಾಗುವಂತೆ ಖಾಲಿ ಹುದ್ದೆಗಳ ಮಾಹಿತಿಯನ್ನು ಪಡೆದು ವ್ಯವಸ್ಥೆಗೊಳಿಸುವುದು ಹಾಗೂ ಲೋಪದೋಷಗಳಿಗೆ ಅವಕಾಶವಾಗದಂತೆ ಕ್ರಮ ಮಾಡತಕ್ಕದ್ದು.
12. ಕಛೇರಿ ಪ್ರತಿ.

\\3-server\Typing3\E\EST4\Mamatha\LOKESH\hudhe-sthalanthara.doc